ಕರ್ನಾಟಕ ವಿಧಾನ ಪರಿಷತ್ತು
146 ನೇ ಅಧಿವೇಶನ 2022

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 1400
ಮಾನ್ಯ ಸದಸ್ಯರ ಹೆಸರು	: ಶ್ರೀಮತಿ. ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	: 09-03-2022
ಉತ್ತರಿಸುವ ಸಚಿವರು	: ಮಾನ್ಯ ಲೋಕೋಪಯೋಗಿ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯ ಅವಂಡಿ ಗ್ರಾಮದ ನಾಪಂಡ ಕಾಡು ಎಂಬಲ್ಲಿ ಮುಕ್ಕೋಡ್ಲು ಹೊಳೆಗೆ ಸೇತುವೆ ನಿರ್ಮಾಣ ಮಾಡುವ ಕಾಮಗಾರಿ ಅತ್ಯಂತ ಅವಶ್ಯ ಮತ್ತು ಅನುವಾರ್ಯವಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಅತ್ಯಾವಶ್ಯಕವಾಗಿ ಮತ್ತು ತುರ್ತಾಗಿ ಆಗಬೇಕಾದ ಸದರಿ ಸೇತುವೆ ನಿರ್ಮಾಣ ಕಾಮಗಾರಿ ಕುರಿತು ಸರ್ಕಾರ ಇದುವರೆಗೂ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು;	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಒಟ್ಟು 504 ಸೇತುವೆಗಳ ಪಟ್ಟಿಯನ್ನು ಅನುಮೋದನೆಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದ್ದು, ಇದರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಮಕ್ಕಂದೂರು-ತಂತಿಪಾಲ-ಮಾಂದಲಪಟ್ಟಿ ಗ್ರಾಮೀಣ ರಸ್ತೆಯ ಸರಪಳಿ 9.10 ರ ಅವಂಡಿ ಗ್ರಾಮದ ನಾಪಂಡ ಕಾಡು ಎಂಬಲ್ಲಿ ಮೂಕ್ಲೋಡು ಹೊಳೆಗೆ ಸೇತುವೆ ನಿರ್ಮಾಣ ಕಾಮಗಾರಿಗಾಗಿ ರೇಖಾ ಅಂದಾಜು ಮೊತ್ತ ರೂ. 1.50 ಕೋಟಿಗಳ ಮೊತ್ತದಲ್ಲಿ ಸೇತುವೆ ನಿರ್ಮಾಣ ಕಾಮಗಾರಿ ಸೇರ್ಪಡೆಯಾಗಿತ್ತು. ಆರ್ಥಿಕ ಇಲಾಖೆಯು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ತಿಳಿಸಿರುತ್ತಾರೆ. "The outstanding commitments of KRDCL are already being very high. Hence, Administrative Department is advised not to take up or approve any new works till the previous works are completed and closed financially" ಅದರಂತೆ, ಸದರಿ ಸೇತುವೆಯ ನಿರ್ಮಾಣ ಕಾಮಗಾರಿಯನ್ನು ಸದ್ಯಕ್ಕೆ ಕೈಬಿಡಲಾಗಿದೆ.
ಇ)	ಮುಂದಿನ ಆರ್ಥಿಕ ವರ್ಷದಲ್ಲಿಯಾದರೂ ಸದರಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಕ್ರಮ ವಹಿಸಲಾಗುವುದೇ?	
ಈ)	ಯಾವ ಕಾಲಮಿತಿಯೊಳಗೆ, ಸದರಿ ಸೇತುವೆಯನ್ನು ನಿರ್ಮಾಣ ಮಾಡಲಾಗುವುದು?	ಆರ್ಥಿಕ ಇಲಾಖೆಯಿಂದ ಅನುದಾನ ಬಿಡಗಡೆಯಾದ ನಂತರ ಆದ್ಯತೆಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಸಂಖ್ಯೆ. ಲೋಇ E-85 ಇಎಪಿ 2022

(ಸಿ.ಸಿ. ಪಾಟೀಲ್)
ಲೋಕೋಪಯೋಗಿ ಸಚಿವರು